Reg No. B G 155 23-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೈಸೆ

ಮೂರನೆ ತರಗತಿ ರೈಲು ಗಾಡಿಯಲ್ಲಿ ಮಲಗುವ ಸೌಕರ್ಯ

ಅಪೊಲೊ 12

★

ಹೌಸ್ಟನ್— ಅಪೊಲೊ 12 ಚಂದ್ರನಲಿಗೆ ನವೆಂಬರು 12 ರಂದು ಹೊರಟು ಅಲ್ಲಿ 28 ಗಂಟೆ ಇರುವದೆಂದೂ, ಹೀಗೇ ಅಲ್ಲಿ ತಂಗುವ ಹೊತ್ತನ್ನು ಹೆಚ್ಚಿಸುತ್ತಾ ಅಪೊಲೋ 20 72 ಗಂಟೆ ಇರಬಹುದೆಂದೂ ಹೇಳಲಾಗಿದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆನಪೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

'ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಪುರಸಭೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾಧಿವೇಶನವು ತಾ ॥ 30 ಬುಧವಾರ ಮಧ್ಯಾಹ್ನಾತ್ಪರ 4 ನಡೆಯುವದು

ಭಾರತಕ್ಕೆ ದ್ವಿತೀಯ ಬಹುಮಾನ

ಟ್ಯುನೀಷಿಯಾದಲ್ಲಿ ತಾ ॥ 19 ರಂದು ನಡೆದ ಜಾನಪದ ಕಲೆಗಳ ಐದನೆಯ ಅಂತಾರಾಷ್ಟ್ರೀಯ ಮೇಳದಲ್ಲಿ ಭಾರತ ದ್ವಿತೀಯ ಬಹುಮಾನ ಗಳಿಸಿದೆ.

●

ಭೂಮಾಲೀಕರ ಸಂಘ

ಮೈಸೂರು— ಮೇಲ್ಕಂಡ ಸಂಘ ಏರ್ಪಡಿಸಿದ್ದ ಸಮ್ಮೇಳನದಲ್ಲಾದ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಈ ಕೆಳಗಿಕಂಡ ಸಮಿತಿ ರಚಿಸಲಾಗಿದೆ—

ಶ್ರೀಮತಿ ನಾಗರತ್ನಮ್ಮ (ಅಧ್ಯಕ್ಷರು) ಶ್ರೀಗಳ್ತಾದ ಹೆಚ್ ಕೆ ವೀರಣ್ಣಗೌಡ, ಭೂಸಾಳಂ ಚಂದ್ರಶೇಖರಯ್ಯ, ಅಗರಂ ರಂಗಯ್ಯ, ಬಿ ಎಸ್ ದತ್ತಾತ್ರಿ, ಡಿ ಜಿ ದೇಶಪಾಂಡೆ, ಆರ್ ಶ್ರೀನಿವಾಸಾಚಾರ್, ಎ ರಾಮರಾವ್, ಸಿ ಬಿ ಮಹಾವೀರ ಪ್ರಸಾದ್ (ಸಂಚಾಲಕರು)

★

ಬೆಳ್ಳೀ ನಾಣ್ಯ

ಮೆಕ್ಸಿಕೊ— 1970 ರ ಫುಟ್‌ಬಾಲ್ ಕಪ್ ಸ್ಪರ್ಧಾರ್ಥ 25 ಪಿಸೋ ಬೆಳ್ಳೀ ನಾಣ್ಯ ಹೊರಡಿಸುವುದಾಗಿ ಸರಕಾರ ಪ್ರಕಟಿಸಿದೆ.

★

ನವದೆಹಲಿ— ಆಕ್ರಮಿತ ಕಾಶ್ಮೀರದಲ್ಲಿ ಚೀನಾ ಸಹಾಯದಿಂದ ಪಾಕಿಸ್ಥಾನ ನಿರ್ಮಿಸುತ್ತಿರುವ ರಸ್ತೆಗಳಿಂದ ಭಾರತ ರಕ್ಷಣೆಗೆ ಆಗಬಹುದಾದ ಮಿಲಿಟರಿ ಅಪಾಯವನ್ನು ಲೋಕಸಭೆಯಲ್ಲಿ ತಿಳಿಸಲಾಯಿತು.

ಚಂಡೀಘರ್ ಹರಯಾಣದ್ದು

ಚಂಡೀಘರ್— ಚಂಡೀಘರವು ಚಂಡಿ ದೇವತೆಯ ಹೆಸರಿನಲ್ಲಿದ್ದು, ಅದು ಹರಯಾಣದಲ್ಲಿರುವದರಿಂದ, ಚಂಡಿಘರ್ ಹರಯಾಣಾಕ್ಕೆ ಸೇರಬೇಕೆಂದು ವಿಧಾನ ಸಭಾ ವಿರೋಧ ನಾಯಕ ರಾವ್ ಬೀರೇಂದ್ರ ಸಿಂಗ್ ಹೇಳಿದ್ದಾರೆ.

★

ದೇವರ ಕೋಪ

ನವದೆಹಲಿ— ಒಬ್ಬ ಸುದ್ದಿಗಾರನ ಮನೆಯಲ್ಲಿ ರೇಡಿಯೋದಲ್ಲಿ ಚಂದ್ರನಲ್ಲಿಗಗನ ಯಾನಿಗಳು ಕಾಲಿಟ್ಟಿದನ್ನು ಕೇಳುತ್ತಿದ್ದಾಗ, ಮನೆಯಲ್ಲಿನ ವೃದ್ಧೆ ಕೆಲಸಗಾರಳು " ಚಂದ್ರ ಮಾ ಮೇಲೆ ಕಾಲಿಟ್ಟ ಅವರು ದೇವರ ಕೋಪಕ್ಕೆ ತುತ್ತಾಗುವುದಿಲ್ಲವೇ ' ಎಂದಾಗ ಮಕ್ಕಳೆಲ್ಲಾ ಹಾಸ್ಯಾಸ್ಪದವಾಗಿ ನಕ್ಕವು.

ವಿಮಾನ ಜೂಜು

ಲಂಡನ್— ಇಂಗ್ಲೆಂಡಿನಿಂದ ಆಸ್ಟ್ರೇಲಿಯಾಕ್ಕೆ ವಿಮಾನ ಜೂಜು ಡಿಸೆಂಬರಿನಲ್ಲಿ ನಡೆಯವುದು – ಬಹುಮಾನದ ಹಣ 50000 ಸ್ಟರ್ಲಿಂಗಿಗೂ ಹೆಚ್ಚಾಗಿರುವದು.

ವಿಶದ ಅಂತ್ಯ

ಆಂಕಾರ— ಚಂದ್ರದಲ್ಲಿ ಇಳಿದಿದ್ದುದನ್ನು ಕೇಳಿದ 62 ವರ್ಷದ ಮುಸ್ತಾಫಾ ಆಲ್ಗರ್ ' ಆಯ್ಯೋ ದೇವರೇ, ಇದು ವಿಶ್ವದ ಅಂತ್ಯವಾಗುವುದು ' ಎಂದು ಕೂಗಿಕೊಂಡು ಬಿದ್ದು ಸತ್ತನು.

★

ಕಲ್ಕತ್ತಾ— ಪ್ರಧಾನಿ ಇಂದಿರಾರವರ ಮೇಲೆ ಬರುವ ಎಲ್ಲ ಅವಿಶ್ವಾಸ ಸೂಚನೆಯನ್ನು ತನ್ನ ಕಮ್ಯುನಿಸ್ಟು ಮಾರ್ಕ್ಸಿಸ್ಟು ಪಕ್ಷವಿರೋಧಿಸಲು ತಿಳಿಸಿರುವದಾಗಿ ಪಾರ್ಟಿ ಕಾರ್ಯದರ್ಶಿ ಹೇಳಿದರು.

ಚಂದ್ರನ ಮೇಲೆ ದೇವರ ಚಿಹ್ನೆ ಯಂತ್ರ ಇಡಲಾಯಿತು

ಹಾಂಕಾಂಗ್— ಅಮೇರಿಕಾ ಗಗನ ಯಾನಿಗಳು ಚಂದ್ರನ ಮೇಲೆ ಬಿಟ್ಟು ಬಂದಿರುವ ಪದಾರ್ಥಗಳ ಜೊತೆಯಲ್ಲಿ ಇಲ್ಲಿನ ಭಾರತ ವಾಣಿಜ್ಯೋದ್ಯಮಿ ಶ್ರೀಪರುಶರಾಂ ಚೈರಾರ್ಯಿ ಕಳುಹಿಸಿಕೊಟ್ಟಿದ್ದ, ಹಿಂದೂ ದೇವರುಗಳಾದ ಶಿವ, ರಾಮ, ಕೃಷ್ಣ, ಹನುಮಂತ, ಸತ್ಯನಾರಾಯಣರ ಚಿಹ್ನೆಯಿದ್ದ ಚಿನ್ನದ ಯಂತ್ರಗಳೂ ಇಡಲಾಗಿವೆ

ರೈಲುಗಳಲ್ಲಿ ಮಲಗುವ ಸೌಕರ್ಯ

ನವದೆಹಲಿ— 4 ನೇ ಯೋಜನೆಯ ಕಡೆಯಲ್ಲಿ ಎಲ್ಲಾ ರೈಲುಗಳಲ್ಲೂ 3 ನೇ ತರಗತಿಯ ಪ್ರಯಾಣೀಕರಿಗೆ ಮಲಗುವ ಸೌಕರ್ಯಗಳಿರುವವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಏನೂ ಬಾಧಕವಿಲ್ಲ

ನವದೆಹಲಿ— ಬ್ಯಾಂಕು ರಾಷ್ಟ್ರೀಕರಣ ವಿಚಾರದಲ್ಲಿ ಸುಪ್ರೀಂ ಕೋರ್ಟು ಇತ್ತಿರುವ ತಡೆ ಆಜ್ಞೆಯಿಂದ ಏನೂ ಬಾಧಕವಿಲ್ಲವೆಂದು ಪ್ರಧಾನಿಯವರು ಲೋಕಸಭೆಯಲ್ಲಿ ತಿಳಿಸಿದರು.

ಹಕ್ಕುಬಾಧ್ಯತೆ

ನವದೆಹಲಿ— ಡೆಲ್ಲೀ ಹೈಕೋರ್ಟಿನಲ್ಲಿ ಶ್ರೀ ತೆಜ್ ಕರ್ ಮತ್ತಿತರು, ಪಾರ್ಲಿಮೆಂಟಿನಲ್ಲಿ ನಡೆದ ಕೆಲವು ಹೇಳಿಕೆ ವಿಷಯದಲ್ಲಿ ತಂದಿರುವ ಮೊಖದ್ದಮೆಯು ಸಭೆಯ ಹಕ್ಕುಬಾಧ್ಯತಾ ಸಂಬಂಧಿಸಿರುವದೆಂದು ಲೋಕಸಭೆಯಲ್ಲಿ ಕೆಲ ಸದಸ್ಯರು ಹೇಳಿದರು – ಕೋರ್ಟು ತೀರ್ಮಾನ ನಂತರ ಪರ್ಯಾಲೋಚಿಸುವದಾಗಿ ಡೆಪ್ಯೂಟಿ ಸ್ಪೀಕರ್ ಹೇಳಿದರು.

ಜುಲೈ 20 ರಜಾದಿನವಾಗಲು

ವಾಷಿಂಗ್ಟನ್— ಚಂದ್ರನಲ್ಲಿಳಿದ ದಿನವಾದ ಜುಲೈ 20 ನ್ನು ವಾರ್ಷಿಕ ರಜಾದಿನವಾಗಿ ಮಾಡಲು ಕಾಂಗ್ರೆಸ್ಸಿನಲ್ಲಿ ಶಾಸನ ತರಲಾಗುವುದು.

ಆಚಾರ್ಯರ ಹೃದಯವಂತಿಕೆ

[' ಲೇಖನ ಕಾವೇರಿ " ಯಿಂದ]

(ಮುಂದುವರಿದುದು)

ವಿಚಾರಿಸಿದ ನಂತರ ಸೆರಿಯನಂಬಿ " ಸ್ವಾಮಿ, ಹೀನಕುಲದಲ್ಲಿ ಹುಟ್ಟಿದ ಪಂಚಮ ಆತ ; ದೇವಸ್ಥಾನಕ್ಕಾಗಲೀ, ಪವಿತ್ರ ಸಭೆಗಳಿಗಾಗಲಿ ಅವನು ಪ್ರವೇಶಿಸುವಂತಿಲ್ಲ " ಎಂದು ಅರಿಕೆಮಾಡಿಕೊಂಡ. ಒಡನೆಯೇ ಆಳವಂದಾರ್ ' ಇಲ್ಲ ನಂಬಿ, ಆಧ್ಯಾತ್ಮಿಕತೆಯ ತಾರತಕ್ಕೇರಿದ ಮಹಾತ್ಮನೀತ ; ಅವನೇನಾದರೂ ನನಗಿಂತ ಮುಂಚೆ ಸ್ವರ್ಗವಾಸಿಯಾದರೆ ಅವನ ಮಗನಂತೆ ಆತನ ಅಂತಿಮ ಸಂಸ್ಕಾರವನ್ನು ಮಾಡುವುದೂ ಪರಮಭಾಗ್ಯವೆಂದು ನಾನು ಭಾವಿಸುತ್ತೇನೆ ; ಅಥವಾ ನನ್ನ ಪರವಾಗಿ ನೀನು ಆತನ ಅಂತಿಮ ಸಂಸ್ಕಾರವನ್ನು ಮಾಡುವೆನೆಂದು ಭಾಷೆಕೊಡು ' ಎಂದು ನುಡಿದರು. ಆಚಾರ್ಯರ ಆ ಆಜ್ಞೆಯನ್ನು ಪೆರಿಯನಂಬಿ ಶಿರಸಾವಹಿಸಿ ನಡೆಸಿದ.

ಆಳವಂದಾರರ ಶಿಷ್ಯರುಗಳಲ್ಲಿ ಒಬ್ಬರಾದ ಶ್ರೀ ರಾಮಾನುಜರು ತಮ್ಮ ಮೊದಲು ದಿನಗಳಿಂದಲೂ ಪರರ ಬಗೆಗೆ ಅಸೀಮ ವಾತ್ಸಲ್ಯ, ಗೌರವಗಳನ್ನು ಉಳ್ಳವರು. ಗೃಹಸ್ಥರಾಗಿದ್ದಾಗ ಅವರು, ಭಾಗವತರನ್ನು ಸ್ವಾಗತಿಸಿ ಆದರಿಸಿ ಸೇವೆ ಸಲ್ಲಿಸುವುದು ತಮ್ಮ ಕರ್ತವ್ಯವೆಂದು ತಿಳಿದಿದ್ದರು. ಆ ಕಾಲದಲ್ಲಿ ಅವರಿದ್ದದ್ದು ಕಾಂಚೀಪುರದಲ್ಲಿ ಅಲ್ಲಿನ ತಿರುಕಾಚ್ಚಿ ನಂಬಿ ಎಂಬ ವೈಶ್ಯನೊಬ್ಬನು ತನ್ನ ಸಕಲ ಸಂಪತ್ತನೂ ವರದರಾಜದೇವರ ಸೇವೆಗೆಂದು ಅರ್ಪಿಸಿ, ದೇವರಿಗೆ ಚಾಮರ ಸೇವೆಯನ್ನು ನಡೆಸುವ ಕಾರ್ಯ ಕೈಗೊಂಡನು. ಎಷ್ಟು ಶ್ರದ್ಧೆಯಿಂದ ಈ ಸೇವೆಯನ್ನು ಆತ ನಡೆಸುತ್ತಿದ್ದನೆಂದರೆ ಸದಾ ಪರಮಾತ್ಮನೊಂದಿಗೆ ತದಾತ್ಮ್ಯತೆಯನ್ನು ಹೊಂದಿರುತ್ತಿದ್ದನು.

ತಿರುಕಾಚ್ಚಿ ನಂಬಿಯನ್ನು ಒಂದು ದಿನಮಟ್ಟಿಗಾದರೂ ತಮ್ಮ ಮನೆಗೆ ಕರೆದೊಯ್ದು ಆದರಾತಿಥ್ಯ ನೀಡಿ ಪುನೀತರಾಗಬೇಕೆಂದು ರಾಮಾನುಜರ ಆಸೆ. ಹಲವು ಬಾರಿ, ತಮ್ಮ ಮನೆಗೆ ಬರಲು ನಂಬಿಯನ್ನು ರಾಮಾನುಜರು ಒತ್ತಾಯಿಸಿದ್ದರು.

ಅಕ್ಕಿ ಗಿರಣಿ— ದೇಶದಲ್ಲಿ ಹೆಚ್ಚು ಅಕ್ಕಿ ಗಿರಣಿಗಳನ್ನು ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.



Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

SHAKTI SUDHA

A Superb Tonic

ಜಯಪ್ರದ 3 ನೇ ವಾರ

ವುಡ್‌ಲ್ಯಾಂಡ್ಸ್

ಉತ್ತರ ಭಾರತವಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯನೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿರಿ

ಅನೋಖಿರಾತ್

ಸಂಗೀತ – ರೋರ್ಷ

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್ ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಅಪೆರಾ— ಅನೋಖ 2 ನೇ ವಾರ

ಅನೋಖ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the ' Satyavadi ' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4